ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ಕಛೇರಿ ದೂರವಾಣಿ ಸಂಖ್ಯೆ:0836-255110

ಇ-ಮೇಲ್: aeeppura@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ),

ಸೆಸ್ಕ್, ಒ ಅಂಡ್ ಎಂ. ಉಪ ವಿಭಾಗ ಪಾಂಡವಪುರ

ಸಂಖ್ಯೆ:-ಸಕಾನಿಇಂ(ವಿ)/ಸ.ಇಂ(ತಾ)/ಸೆಸ್ಕ್/ಪಾ.ಪುರ/20-21/564-71 ದಿನಾಂಕ: 06/07/2021

ದಿನಾಂಕ:18-06-2020 ರ ಗುರುವಾರ ಮಧ್ಯಹ್ನ 3.00 ಕ್ಕೆ ಶ್ರೀ ಸೋಮರಾಜು ಕಾರ್ಯನಿರ್ವಾಹಕ ಇಂಜನಿಯರ್ (ವಿ) ಸೆಸ್ಕ್ ಪಾಂಡವಪುರ ವಿಭಾಗ ರವರ ಅಧ್ಯಕ್ಷತೆಯಲ್ಲಿ, ಪಾಂಡವಪುರ ಉಪವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು / ನೌಕರರು**
**ಶ್ರೀಯುತ /ಶ್ರೀಮತಿ:**

1. ವಿ ಪುಟ್ಟಸ್ವಾಮಿ : ಸಕಾನಿಇಂ (ವಿ), ಪಾಂಡವಪುರ ಉಪವಿಭಾಗ.
2. ರೂಪಿಣಿ ಎಂ.ಎನ್ : ಸಇಂ(ತಾ), ಪಾಂಡವಪುರ ಉಪವಿಭಾಗ.
3. ವಿ.ಕೃಷ್ಣಮೂರ್ತಿ : ಪ್ರಸಇಂ (ವಿ), ಟಿ.ಎಸ್.ಛತ್ರ ಶಾಖೆ.
4. ಬಿ ನಂದೀಶ್ : ಕಿಇಂ (ವಿ), ಬನ್ನಂಗಾಡಿ ಶಾಖೆ.
5. ಎಂ.ಬಿ.ಚಲುವರಾಜು : ಕಿಇಂ (ವಿ), ಮಾಣಿಕ್ಯನಹಳ್ಳಿ ಶಾಖೆ.
6. ಸತೀಶ್ : ಸಇಂ (ವಿ), ಮೇಲುಕೋಟೆ ಶಾಖೆ.
7. ಪಾಂಡುರಂಗ : ಸಇಂ (ವಿ), ಪಟ್ಟಣ ಶಾಖೆ.

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು. ಜೊತೆಗೆ ಹಿಂದಿನ ಜನಸಂಪರ್ಕ ಸಭೆಯಲ್ಲಿ ಬಂದ ದೂರುಗಳು ಅವುಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ಸಭೆಯಲ್ಲಿ ಓದಲಾಯಿತು. ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರು ಮೌಖಿಕವಾಗಿ ಮತ್ತು ಲಿಖಿತವಾಗಿ ತಿಳಿಸಿದ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ/ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

**1. ಶ್ರೀ ಹೆಚ್.ಆರ್.ಕೃಷ್ಣೇಗೌಡ (ಮಾಜಿ ಸೈನಿಕ) ಗಾಣದ ಹೊಸೂರು ಗ್ರಾಮ ಮೊ.ಸಂಖ್ಯೆ:7996764211**

**ದೂರು**:- ತೋಟದ ಮಧ್ಯ ಹಾದು ಹೋಗಿರುವ ವಿದ್ಯುತ್ ಮಾರ್ಗವನ್ನು ಬದಲಾಯಿಸುವುದರ ಜೊತೆಗೆ 8 ಮೀ ಎತ್ತರದ ಕಂಬಗಳನ್ನು ಬದಲಿಸಿ 9ಮೀ ಎತ್ತರದ ಕಂಬಗಳನ್ನು ಅಳವಡಿಸಿಕೊಟ್ಟು ವಿದ್ಯುತ್ ಅಡಚಣೆಯನ್ನು ತಪ್ಪಿಸಿರೆಂದು ಕೋರಿದರು ಅಲ್ಲದೆ ನುಗ್ಗಹಳ್ಳಿ ಫೀಡರ್ ನಿಂದ ಕೊಡುತ್ತಿರುವ ವಿದ್ಯುತ್ ಮಾರ್ಗವನ್ನು ಬದಲಿಸಿ ಬನ್ನಘಟ್ಟ ಫೀಡರ್ ನಿಂದ ನೀಡುವಂತೆ ಕೋರಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಮಾತನಾಡಿ ಸಂಬಂಧಪಟ್ಟ ಶಾಖಾಧಿಕಾರಿಗೆ ವಿದ್ಯುತ್ ಮಾರ್ಗವಿರುವ ಜಾಗದಲ್ಲಿ 9 ಮೀ ಎತ್ತರದ ಕಂಬಗಳನ್ನು ಹಾಕಲು ತಿಳಿಸಿದರು. ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲು ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಹಣ ಪಾವತಿಸಿದರೆ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಬಹುದು ಹಾಗೆಯೇ ಬನ್ನಘಟ್ಟ ಫೀಡರ್ ಅಧಿಕ ಭಾರದಿಂದಾಗಿ ಇವರ ವ್ಯಾಪ್ತಿಯ ಸ್ವಲ್ಪ ಭಾರವನ್ನು ತಾತ್ಕಾಲಿಕವಾಗಿ ನುಗ್ಗಹಳ್ಳಿ ಫೀಡರ್ ನ ಮೇಲೆ ಬದಲಾಯಿಸಲಾಗಿದೆ.ನಂತರದ ದಿನಗಳಲ್ಲಿ ಬನ್ನಘಟ್ಟ ಫೀಡರ್ ಮೇಲೆ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲಾಗುವುದೆಂದು ತಿಳಿಸಿದರು.

2. ಶ್ರೀ ಪುಟ್ಟನಂಜೇಗೌಡ ಪಿ.ಹೆಚ್ ಪಟ್ಟಸೋಮನಹಳ್ಳಿ ಗ್ರಾಮ ಮೊ.ಸಂಖ್ಯೆ:9900582826

ದೂರು:- UNIP ಕಾಮಗಾರಿಯಡಿಯಲ್ಲಿ ಕಾರ್ಯದೇಶವಾಗಿರುವ ನಮ್ಮ ಕೆಲಸವನ್ನು ಮಾಡಿಸಿಕೊಡುವಂತೆ ಕೋರಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಕಾಮಗಾರಿಗಳನ್ನು ಜೇಷ್ಠತೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು ಆದಷ್ಟು ಬೇಗ ಕಾಮಗಾರಿಯನ್ನು ಪೂರೈಸುತ್ತೇವೆಂದು ತಿಳಿಸಿದರು.

3. ಶ್ರೀ ವೆಂಕಟೇಶ್ ಟಿ. ಸುಮುಖಾ ಸ್ಟೋನ್ ಕ್ರಷರ್ ರಂಗನಕೊಪ್ಪಲು ಗ್ರಾಮ ಮೊ.ಸಂಖ್ಯೆ:9448528855.

ದೂರು:- ನಮ್ಮ ಸ್ಟೋನ್ ಕ್ರಷರ್‌ಗೆ ಟಿ.ಎಸ್.ಛತ್ರ ಶಾಖೆಯಿಂದ ವಿದ್ಯುತ್ ಪೂರೈಸುತ್ತಿರುವುದರಿಂದ ಅಡಚಣೆಯಾಗುತ್ತಿದ್ದು, ಪಟ್ಟಣದ ಫೀಡರ್ ನಿಂದ ವಿದ್ಯುತ್ ಪೂರೈಸಿ ಅನುಕೂಲಮಾಡಿಕೊಡುವಂತೆ ಕೋರಿದರು, ಮತ್ತು ಶಂಭುನಹಳ್ಳಿ ಗ್ರಾಮದ ಹತ್ತಿರ ಜೋತು ಬಿದ್ದಿರುವ ಲೈನ್ ಅನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಸಂಬಂದಪಟ್ಟ ಶಾಖಾಧಿಕಾರಿಗೆ ಪಟ್ಟಣ ಫೀಡರ್‌ನಿಂದ ವಿದ್ಯುತ್ ಪೂರೈಸಲು ಅಂದಾಜು ಪಟ್ಟಿ ಸಲ್ಲಿಸುವಂತೆಯು ಮತ್ತು ಜೋತು ಬಿದ್ದಿರುವ ಮಾರ್ಗಕ್ಕೆ ಮಧ್ಯಂತರ ಕಂಬಗಳನ್ನು ಹಾಕುವಂತೆ ಸೂಚಿಸಿದರು.

4. ಶ್ರೀ ಪ್ರಸನ್ನ ಕುಮಾರ್, ಪಾಂಡವಪುರ ಮೊ.ಸಂಖ್ಯೆ:9945443315.

ದೂರು:- ನಮ್ಮ ಮನೆಯ ಹತ್ತಿರ ಹಾದು ಹೋಗಿರುವ ವಿದ್ಯುತ್ ಮಾರ್ಗಕ್ಕೆ ಹೊಂದಿಕೊಂಡಂತೆ ಇರುವ ಮರದ ರೆಂಬೆಗಳನ್ನು ತೆರವು ಮಾಡುವಂತೆ ಕೋರಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ನಮ್ಮ ವ್ಯಾಪ್ತಿಗೆ ಬಾರದ ಕಾರಣ ನೀವು ಅರಣ್ಯ ಇಲಾಖೆಯವರನ್ನು ಭೇಟಿ ಮಾಡಿ ತೆರವು ಮಾಡಿಕೊಳ್ಳುವಂತೆ ತಿಳಿಸಿದರು.

5. ಶ್ರೀ ರಾಮಕೃಷ್ಣೇಗೌಡ, ಹೀರೆಮರಳ್ಳಿ ಗ್ರಾಮ ಮೊ.ಸಂಖ್ಯೆ:9945511782.

ದೂರು:- UNIP ಕಾಮಗಾರಿಯಡಿಯಲ್ಲಿ ಕಾರ್ಯದೇಶವಾಗಿರುವ ನಮ್ಮ ಕೆಲಸವನ್ನು ಮಾಡಿಸಿಕೊಡುವಂತೆ ಕೋರಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಕಾಮಗಾರಿಗಳನ್ನು ಜೇಷ್ಠತೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು ಆದಷ್ಟು ಬೇಗ ಕಾಮಗಾರಿಯನ್ನು ಪೂರೈಸುತ್ತೇವೆಂದು ತಿಳಿಸಿದರು.

**6. ಶ್ರೀ ತಮ್ಮಣ್ಣಗೌಡ, ಚಿನಕುರಳಿ ಗ್ರಾಮ ಮೊ.ಸಂಖ್ಯೆ:9449802885.**

ದೂರು:- ನಮ್ಮ ಪೆಟ್ರೋಲ್ ಬಂಕ್ ಗೆ ಟಿ.ಸಿ ಅಳವಡಿಸಿಕೊಡುವಂತೆ ಮತ್ತು ಒಂದು ಕಂಬವನ್ನು ಪಕ್ಕಕ್ಕೆ ಸ್ಥಳಾಂತರಿಸಿ ಕೊಡುವಂತೆ ಕೋರಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಮೂಲಕ ಅರ್ಜಿ ಯನ್ನು ನೊಂದಾಯಿಸಿ ಉದ್ದೇಶಿತ ಪಟ್ರೋಲ್ ಬಂಕಿಗೆ ವಿದ್ಯುತ್ ಸಂಪರ್ಕ ಪಡೆಯುವುದು ಮತ್ತು ಸ್ವಯಂ ನಿರ್ವಾಹಣೆ ಯೋಜನೆಯಡಿಯಲ್ಲಿ ಕಂಬವನ್ನು ಸ್ಥಳಾಂತರಿಸಿಕೊಳ್ಳುವಂತೆ ತಿಳಿಸಿದರು.

**7. ಶ್ರೀ ಕೆಂಪೂಗೌಡ, ಅರಳಕುಪ್ಪೆ ಗ್ರಾಮ ಮೊ.ಸಂಖ್ಯೆ:9945302066.**

ದೂರು:- ತೋಟದ ಮಧ್ಯ ಹಾದು ಹೋಗಿರುವ ಕಂಬಗಳು ತುಂಬಾ ಅಂತರದಲ್ಲಿದ್ದು, ಅವುಗಳಿಗೆ ಮಧ್ಯಂತರ ಕಂಬಗಳನ್ನು ಅಳವಡಿಸಿಕೊಡುವಂತೆ ಕೋರಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಸಂಬಂಧ ಪಟ್ಟ ಶಾಖಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸುವಂತೆ ತಿಳಿಸಿದರು.

**8. ಶ್ರೀ ಮೈಲಾರಿಗೌಡ, ಹೊಸಕೋಟೆ ಗ್ರಾಮ ಮೊ.ಸಂಖ್ಯೆ:9880864067.**

ದೂರು:- UNIP ಕಾಮಗಾರಿಯಡಿಯಲ್ಲಿ ಕಾರ್ಯದೇಶವಾಗಿರುವ ನಮ್ಮ ಕೆಲಸವನ್ನು ಮಾಡಿಸಿಕೊಡುವಂತೆ ಕೋರಿದರು.

ಕ್ರಮ:- ಸಭೆಯಲ್ಲಿದ್ದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಕಾಮಗಾರಿಗಳನ್ನು ಜೇಷ್ಠತೆಯ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು ಆದಷ್ಟು ಬೇಗ ಕಾಮಗಾರಿಯನ್ನು ಪೂರೈಸುತ್ತೇವೆಂದು ತಿಳಿಸಿದರು.

**:: ಸಭೆಯನ್ನು ಮಧ್ಯಾಹ್ನ 4.00 ಗಂಟೆಗೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು ::**

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/

ದಿನಾಂಕ:

**ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:**

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.

3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:**

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:**

೧. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.
೨. ಸ೩೦(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.